ಉದಯವಾಣಿ
ಕನ್ನಡ ದಿನಪತ್ರಿಕೆ

**Tuesday, August 23rd, 2010**

# ಅನುವಾದ ಕಮ್ಮಟ

ಬೆಂಗಳೂರು, ಆ. 22: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಜೈನ್ ವಿಶ್ವವಿದ್ಯಾಲಯ ಆಶ್ರಯದಲ್ಲಿ ಇದೇ 24ರಿಂದ 28 ರವರೆಗೆ 'ಹಿಂದಿ ಕನ್ನಡ ಅನುವಾದ ಕಮ್ಮಟ' ಆಯೋಜಿಸಲಾಗಿದೆ.

ವಿಶ್ವೇಶ್ವರಪುರಂನ ಶ್ರೀ ಭಗವಾನ್ ಮಹಾವೀರ ಜೈನ್ ಕಾಲೇಜಿನಲ್ಲಿ ಕಮ್ಮಟ ನಡೆಯಲಿದೆ. ಜೈನ್ ವಿಶ್ವವಿದ್ಯಾಯದ ಕುಲಾಧಿಪತಿ ಡಾ. ಆರ್. ಚೆನ್ನರಾಜ್ ಕಮ್ಮಟ ಉದ್ಘಾಟಿಸಲಿದ್ದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಪ್ರಧಾನ್ ಗುರುದತ್ತ ಅದ್ಯಕ್ಷತೆ ವಹಿಸಲಿದ್ದಾರೆ.

ಐದು ದಿನಗಳ ಕಮ್ಮಟದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ। ತೇಜಸ್ವಿ ಕಟ್ಟೀಮನಿ, ಡಾ। ಬಿ. ಗಣೇಶ್, ಡಾ। ಜಿ. ಅಶ್ವಥ್‌ನಾರಾಯಣ ಭಾಗವಹಿಸಲಿದ್ದಾರೆ.